## 2 ನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ನ್ಯಾಯಾಲಯ, ಕನಕಪುರ

### ಸಿ.ಸಿ. ನಂ.122/2021

**ಪಿರ್ಯಾದಿ** - ಅಬಕಾರಿ ನಿರೀಕ್ಷಕರು, ಕನಕಪುರ ವಲಯ, ಕನಕಪುರ

**ವಿರುದ್ಧ**

**ಆರೋಪಿ** - ಜಯರಾಮು ಬಿನ್ ಮಂದೇಗೌಡ,
52 ವರ್ಷ ವಯಸ್ಸು,
ತುಂಗಾಣಿ ಗ್ರಾಮ,
ಕಸಬ ಹೋಬಳಿ,
ಕನಕಪುರ ತಾಲ್ಲೂಕು,
ರಾಮನಗರ ಜಿಲ್ಲೆ.

**ದೋಷಾರೋಪಣೆ**

ವಿನಯ್ ವಿ ಕುಂದಾಪುರ, ಎರಡನೇ ಅಪರ ಸಿವಿಲ್ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ., ಕನಕಪುರ ಆದ ನಾನು, ನಿಮ್ಮ ವಿರುದ್ಧ ಮಾಡುವ ದೋಷಾರೋಪಣೆ ಏನೆಂದರೆ,

ದಿನಾಂಕಃ 26-10-2020 ರಂದು ಮಧ್ಯಾಹ್ನ 03.00 ಗಂಟೆ ಸಮಯದಲ್ಲಿ ಅಬಕಾರಿ ನಿರೀಕ್ಷಕರಾದ ಚಾಸಾ-1 ರವರು, ಕನಕಪುರ ವಲಯ, ಅಬಕಾರಿ ರಕ್ಷಕರಾದ ಚಾಸಾ-4 ರವರೊಂದಿಗೆ ಶಿಕ್ಷಕರ ಕ್ಷೇತ್ರ ಚುನಾವಣೆ 2020 ರ ಹಿನ್ನೆಲೆಯಲ್ಲಿ ಕನಕಪುರ ತಾಲ್ಲೂಕು, ಕಸಬಾ ಹೋಬಳಿ ಛತ್ರ ಗ್ರಾಮದ ಕನಕಪುರ - ಬೆಂಗಳೂರು ಮುಖ್ಯ ರಸ್ತೆಯಲ್ಲಿ ರಸ್ತೆ ಗಸ್ತು ನಡೆಸುತ್ತಿದ್ದಾಗ ಛತ್ರ ಗ್ರಾಮದ ಬಸ್ ನಿಲ್ದಾಣದ ಹತ್ತಿರ ಆರೋಪಿಯಾದ ನೀವು ಒಂದು ಬಿಳಿ ಬಣ್ಣದ ಹೊಂಡಾ ಆಕ್ಟಿವಾ 5 ಜಿ ದ್ವಿಚಕ್ರ ವಾಹನವನ್ನು ನಿಲ್ಲಿಸಿಕೊಂಡು ನಿಂತಿದ್ದು, ದ್ವಿಚಕ್ರ ವಾಹನದ ಮುಂದುಗಡೆ ರಟ್ಟಿನ ಪೆಟ್ಟಿಗೆ ಇಟ್ಟಿರುವುದು ಕಂಡು ಬಂದಿದ್ದು, ಅದನ್ನು ನೋಡಿದ ಸಿಬ್ಬಂದಿಯವರು ಸರ್ಕಾರಿ ವಾಹನ ನಿಲ್ಲಿಸಿ

ವಾಹನದ ಬಳಿ ತೆರಳುತ್ತಿದ್ದಂತೆ ವಾಹನ ಸವಾರನು ಸರ್ಕಾರಿ ವಾಹನ ಮತ್ತು ಸಮವಸ್ತ್ರಧಾರಿಗಳಾದ ಸಿಬ್ಬಂದಿಯವರನ್ನು ನೋಡಿ ವಾಹನವನ್ನು ಬಿಟ್ಟು ಓಡಿ ಹೋದನು ಸಿಬ್ಬಂದಿಯು ವಾಹನ ಸವಾರನನ್ನು ಹಿಡಿಯಲು ಪ್ರಯತ್ನಿಸಿದರೂ ಆತನು ಸಿಕ್ಕಿರುವುದಿಲ್ಲ. ನಂತರ ಸದರಿ ವಾಹನದ ಬಳಿ ಬಂದು ವಾಹನದ ಮುಂಭಾಗದಲ್ಲಿ ಒಂದು ರಟ್ಟಿನ ಪೆಟ್ಟಿಗೆಯಿದ್ದು, ಸದರಿ ರಟ್ಟಿನ ಪೆಟ್ಟಿಗೆ ಮತ್ತು ವಾಹನವನ್ನು ಶೋಧಿಸುವ ಸಂಬಂಧ ನ್ಯಾಯಾಲಯದಿಂದ ಶೋಧನಾ ವಾರೆಂಟ್ ಪಡೆಯಲು ಕಾಲಾವಕಾಶವಿಲ್ಲದ ಕಾರಣ ಹಾಗೂ ಕೃತ್ಯಕ್ಕೆ ಸಂಬಂಧಿಸಿದ ಸಾಕ್ಷಾಧಾರಗಳನ್ನು ನಾಶಪಡಿಸುವ ಸಾಧ್ಯತೆ ಇದುದ್ದರಿಂದ ಸ್ಥಳದಲ್ಲಿಯೇ ಶೋಧನಾ ಕಾರಣಗಳನ್ನು ನಮೂದಿಸಿ ಶೋಧನಾ ವಾರೆಂಟ್ ತಯಾರಿಸಲಾಯಿತು. ನಂತರ ಸದರಿ ರಸ್ತೆಯಲ್ಲಿ ನಡೆದು ಬರುತ್ತಿದ್ದ ಇಬ್ಬರು ವ್ಯಕ್ತಿಗಳನ್ನು ಕರೆದು ಉದ್ದೇಶವನ್ನು ತಿಳಿಸಿ ಈ ನಡವಳಿಯಲ್ಲಿ ಪಂಚರಾಗಿ ಸಹಕರಿಸಲು ಕೋರಲಾಗಿ, ಒಪ್ಪಿ ಮುಂದೆ ಬಂದ ಆ ಇಬ್ಬರು ಪಂಚರ ಸಮಕ್ಷಮ ರಟ್ಟಿನ ಪೆಟ್ಟಿಗೆಯನ್ನು ತೆರೆದು ನೋಡಿದಾಗ ಅಕ್ರಮ ಮದ್ಯವನ್ನು ಹೊಂದಿರುವುದು ಕಂಡು ಬಂದಿದ್ದು, ಆ ಮೂಲಕ ಕರ್ನಾಟಕ ಅಬಕಾರಿ ಕಾಯ್ದೆ 1965 ರ ಕಲಂ 11, 12, 14 ನ್ನು ಉಲ್ಲಂಘಿಸಿದ್ದು, 32, 38(ಎ) 43 ಹಾಗೂ 43(ಎ) ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯೊಳಗೆ ಮಾಡಿರುತ್ತೀರಿ.

ಮೇಲ್ಕಂಡ ಅಪರಾಧಗಳಿಗಾಗಿ ಈ ನ್ಯಾಯಾಲಯದ ವಿಚಾರಣೆಗೆ, ಗುರಿಯಾಗುತ್ತಿದ್ದೀರೆಂದು ನಾನು ಈ ಮೂಲಕ ನಿರ್ದೇಶಿಸುತ್ತಿದ್ದೇನೆ.

2 ನೇ ಅಪರ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ.,
ಕನಕಪುರ.

1. ಪ್ರಶ್ನೆ : ಈಗ ಓದಿ ಹೇಳಿದ ದೋಷಾರೋಪಣಾ ಸಾರಾಂಶ ಅರ್ಥವಾಯಿತೇ ?

ಉತ್ತರ:

2. ಪ್ರಶ್ನೆ: ನಿಮ್ಮ ಮೇಲೆ ಮಾಡಿರುವ ದೋಷಾರೋಪಣೆಯನ್ನು ಒಪ್ಪಿಕೊಳ್ಳುತ್ತೀರಾ ಅಥವಾ ವಿಚಾರಣೆಯಾಬೇಕೆಂದು ಬಯಸುವಿರಾ ?

ಉತ್ತರ:

**(ಈ ಆರೋಪಣೆಯನ್ನು ದಿನಾಂಕ 29-09-2025 ರಂದು ಆರೋಪಿಗೆ ತಿಳಿದ ಭಾಷೆಯಲ್ಲಿ ಓದಿ ಹೇಳಿ, ವಿವರಿಸಿ ಅವರಿಂದ ಉತ್ತರ ಪಡೆದು ಉತ್ತರವನ್ನು ದಾಖಲಿಸಿದ್ದೇನೆ.)**

**2 ನೇ ಅಪರ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ.,**
**ಕನಕಪುರ.**

ಆರೋಪಿತನ ಸಹಿ: